ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 285 ಚುಸಿಆ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 20-07-2013.

E.S.T.(9)

3220
Date 1-8-13

**ಸುತ್ತೋಲೆ**

ವಿಷಯ:- ಕರ್ನಾಟಕ ರಾಜ್ಯದ 20-ಮಂಡ್ಯ ಲೋಕಸಭಾ ಕ್ಷೇತ್ರ ಹಾಗೂ 23-ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಿಂದ ಲೋಕಸಭೆಗೆ ಉಪ ಚುನಾವಣೆ, 2013 – ಸಹಕಾರ ಮತ್ತು ಸಹಾಯವನ್ನು ಚುನಾವಣಾ ಪ್ರಾಧಿಕಾರಿಗಳಿಗೆ ನೀಡುವ ಬಗ್ಗೆ.

- - - -

ಭಾರತ ಚುನಾವಣಾ ಆಯೋಗವು ಕರ್ನಾಟಕ ರಾಜ್ಯದ 20-ಮಂಡ್ಯ ಲೋಕಸಭಾ ಕ್ಷೇತ್ರ ಹಾಗೂ 23-ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಿಂದ ಲೋಕಸಭೆಗೆ ಉಪಚುನಾವಣೆ, 2013ರ ವೇಳಾ ಪಟ್ಟಿಯನ್ನು ಪ್ರಕಟಿಸಿದೆ. ಸದರಿ ಕಾರ್ಯಕ್ರಮದ ಪ್ರಕಾರ ಈ ಉಪ ಚುನಾವಣೆಯ ಮತದಾನವು ದಿನಾಂಕ: 21-08-2013 ರಂದು ಮತದಾನ ನಡೆಸಲಾಗುವುದು ಮತ್ತು ದಿನಾಂಕ 24-08-2013 ರಂದು ಮತ ಎಣಿಕೆ ಕಾರ್ಯ ನಡೆಸಲಾಗುವುದು. ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಹಾಗೂ ರಾಜ್ಯ ಸರ್ಕಾರದ ತೀವ್ರ ಅನುಸರಣೆಗಾಗಿ ಮಾದರಿ ನೀತಿ ಸಂಹಿತೆಯು ಯಾವುದೇ ಜಿಲ್ಲೆಯ ವಿಧಾನಸಭಾ ಕ್ಷೇತ್ರವು ಪೂರ್ತಿ ಅಥವಾ ಭಾಗಶ: ಚುನಾವಣೆಗೆ ಒಳಗೊಂಡಿದ್ದಲ್ಲಿ, ಇಡೀ ಜಿಲ್ಲೆಗೆ ಅನ್ವಯಿಸುತ್ತದೆ. ಭಾರತ ಚುನಾವಣಾ ಆಯೋಗವು ನಿಗದಿಪಡಿಸಿರುವ ಮಾದರಿ ನೀತಿ ಸಂಹಿತೆಯು ದಿನಾಂಕ 19-07-2013 ರಿಂದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಮಂಡ್ಯ, ತುಮಕೂರು ಮತ್ತು ಮೈಸೂರು ಜಿಲ್ಲೆಯಾದ್ಯಂತ ಜಾರಿಗೆ ಬಂದಿರುತ್ತದೆ ಹಾಗೂ ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ: 437/6/ಐಎನ್‌ಎಸ್‌ಟಿ/2012/ ಸಿಸಿ & ಬಿಇ, ದಿ: 24-06-2012 ರಲ್ಲಿ ಹಾಲಿ ಚಾಲ್ತಿಯಲ್ಲಿರುವ ಮಾದರಿ ನೀತಿ ಸಂಹಿತೆಯ ಜೊತೆಗೆ ಉಪಚುನಾವಣೆಗಳಿಗೆ ಸಂಬಂಧಿಸಿದಂತೆ ಕೆಲವು ಅಂಶಗಳಿಗೆ ಭಾಗಶ: ಮಾರ್ಪಾಡು ಮಾಡಿರುವ ಸೂಚನೆಯು ಈ ಕೆಳಕಂಡಂತೆ ನೀಡಿರುತ್ತದೆ.

1. All instructions of the Commission issued regulating the implementation of the schemes of MNREGA, extending relief and starting works in case of Natural Calamities, Drought, Flood, Drinking Water, Digging of Bore-wells, Fodder, Agricultural inputs and input subsidies to farmers, New Developmental Work (whether beneficiary or work oriented) including work under MPLAD, MLA and MLC LAD scheme, announcement and commencement of New Projects, Programme, Concessions, Financial Grants, Defacement of Property, Use of Govt. Property for campaign purpose, etc., shall now be applicable only in respect of the areas falling in the Assembly constituency(s)/ Parliamentary constituency going for bye-election and NOT TO the entire district(s) in which such constituency is situated.

2. However, all other existing instructions of the Commission on Model Code of Conduct on matters like Tours of Ministers, Vehicles, Advertisements, use of

...2

Govt. Guest Houses, and all prevailing Commission's instructions other than those mentioned in Para (1), transfersof officers etc. shall continue to remain applicable to the entire district (s) in which the constituency having the bye-election is situated.

ಈ ಉಪ ಚುನಾವಣೆಯನ್ನು ಸುಗಮವಾಗಿ ಮತ್ತು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಚುನಾವಣಾ ಪ್ರಾಧಿಕಾರಿಗಳಿಗೆ ಕೆಳಕಂಡ ವಿಷಯಗಳಲ್ಲಿ ವಿವಿಧ ಸರ್ಕಾರಿ ಇಲಾಖೆಗಳ ಸ್ಥಳೀಯ ಸಂಸ್ಥೆಗಳ ಸಹಕಾರ ಮತ್ತು ಸಹಾಯದ ಅವಶ್ಯಕತೆ ಇದೆ.

1. <u>ಚುನಾವಣೆಗಳಿಗಾಗಿ ಗೊತ್ತುಪಡಿಸಿದ ಅಧಿಕಾರಿಗಳ ಸೇವೆ:</u>

ಸದರಿ ಉಪ ಚುನಾವಣೆಗಾಗಿ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ನೌಕರರ ಸೇವೆ ಬೇಕೆಂದು ಚುನಾವಣಾ ಪ್ರಾಧಿಕಾರಿಗಳಿಂದ ಕೋರಿಕೆ ಬಂದಲ್ಲಿ ಆದ್ಯತೆಯ ಮೇರೆಗೆ ಅದನ್ನು ಈಡೇರಿಸಬೇಕು.

2. <u>ಸರ್ಕಾರಿ ನೌಕರರ ವರ್ಗಾವಣೆ / ರಜೆ ಮಂಜೂರಾತಿ:</u>

ಚುನಾವಣೆ ನಡೆಸುವುದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಸೇವೆ ಮತ್ತು ಸ್ಥಳೀಯ ಸಂಸ್ಥೆಗಳ ಸೇವೆಯ ಸಿಬ್ಬಂದಿ ಬೇಕಾಗುವುದು. ಆದ್ದರಿಂದ, ಉಪ ಚುನಾವಣೆ ನಡೆಯುವ ಜಿಲ್ಲೆಗೆ ಸಂಬಂಧಿಸಿದಂತೆ, ಚುನಾವಣಾ ಆಯೋಗದೊಡನೆ ಸಮಾಲೋಚಿಸದ ಹೊರತು ಚುನಾವಣೆ ಪೂರ್ಣಗೊಳ್ಳುವವರೆಗೆ ಸದರಿ ನೌಕರರನ್ನು ವರ್ಗಾಯಿಸತಕ್ಕದ್ದಲ್ಲ ಅಥವಾ ತರಬೇತಿಗೆ ಕಳುಹಿಸತಕ್ಕದ್ದಲ್ಲ ಅಥವಾ ಅವರಿಗೆ ಯಾವುದೇ ರೀತಿಯ ರಜೆಯನ್ನು ಮಂಜೂರು ಮಾಡಕೂಡದು. ತುರ್ತು ಸಂದರ್ಭದಲ್ಲಿ 1–2 ದಿನಗಳ ಮಟ್ಟಿಗೆ ಆಕಸ್ಮಿಕ ರಜೆ ಮಂಜೂರು ಮಾಡಲು ಯಾವ ಆಕ್ಷೇಪಣೆಯಿರುವುದಿಲ್ಲ. ಆದರೆ, ಅಂತಹ ದಿನಗಳಂದು ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿ ಆ ನೌಕರರ ಸೇವೆಯು ಅಗತ್ಯ ಇರುವುದಿಲ್ಲವೆಂದು ಖಚಿತಪಡಿಸಿಕೊಳ್ಳುವುದು. ಸಾಮಾನ್ಯ ನಿಯಮಾವಳಿಯಂತೆ ಮಾಡುವ ಮುಂಬಡ್ತಿಯನ್ನು ಹೊರತುಪಡಿಸಿ ತಾತ್ಕಾಲಿಕ ಮುಂಬಡ್ತಿ ನೇಮಕಾತಿಗಳನ್ನು ಸರ್ಕಾರಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಮಾಡಕೂಡದು.

ಚುನಾವಣೆಯ ಕೆಲಸಗಳನ್ನು ನಿರ್ವಹಿಸಲು ನೇರವಾಗಿ ಸಂಬಂಧಿಸಿದ ಹಿರಿಯ ಅಧಿಕಾರಿಗಳನ್ನು ಇತರೆ ಇಲಾಖೆಗಳ ಕೆಲಸಗಳನ್ನು ನಿರ್ವಹಿಸಲು ಹೆಚ್ಚಿನ ಪ್ರಭಾರೆಯಲ್ಲಿಡಬಾರದು.

3. <u>ಆವರಣಗಳು / ಕಟ್ಟಡ ಮುಂತಾದವುಗಳನ್ನು ಒದಗಿಸುವುದು:</u>

ಚುನಾವಣೆ ಸಂಬಂಧದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲು ಅಥವಾ ಚುನಾವಣೆಗಾಗಿ ಬೇಕಾಗುವ ಶಾಲೆ, ಕಾಲೇಜು ಕಟ್ಟಡಗಳನ್ನು ಮತ್ತು ಇತರ ಸರ್ಕಾರಿ ಕಟ್ಟಡಗಳನ್ನು ಅಗತ್ಯ ದುರಸ್ತಿಗಳೊಡನೆ ಸುಸ್ಥಿತಿಯಲ್ಲಿರುವ ಪೀಠೋಪಕರಣಗಳೊಂದಿಗೆ ಒದಗಿಸಬೇಕು.

4. <u>ವಾಹನಗಳನ್ನು ಒದಗಿಸುವುದು:</u>

ಚುನಾವಣೆಗಾಗಿ ಬೇಕಾಗುವ ವಾಹನಗಳನ್ನು ಚುನಾವಣಾ ಪ್ರಾಧಿಕಾರಿಗಳು ಕೋರಿಕೆ ಸಲ್ಲಿಸಿದಾಗ ಒದಗಿಸತಕ್ಕದ್ದು. ಅಂತಹ ವಾಹನಗಳು ಸುಸ್ಥಿತಿಯಲ್ಲಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

...3

**5. <u>ನೀತಿ ಸಂಹಿತೆ:</u>**

ಎ) ಅಖಿಲ ಭಾರತ ಸೇವೆಗಳು, ನಡತೆ ನಿಯಮಾವಳಿಗಳು, ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು, 1966 ರಲ್ಲಿ ಇರುವಂತೆ ಮತ್ತು ತತ್ಸಮವಾಗಿ ಅನ್ವಯಿಸುವ ನಿಯಮಗಳಿಗನುಸಾರವಾಗಿ ಯಾವೊಬ್ಬ ಸರ್ಕಾರಿ ನೌಕರನು ಚುನಾವಣೆಗೆ ಸಂಬಂಧಿಸಿದಂತೆ, ಪ್ರಚಾರವನ್ನಾಗಲಿ ಅಥವಾ ಹಸ್ತಕ್ಷೇಪವನ್ನಾಗಲಿ ಅಥವಾ ಪ್ರಭಾವವನ್ನು ಬೀರುವುದಾಗಲಿ ಮಾಡಕೂಡದು. ಮುಖ್ಯವಾಗಿ ಸರ್ಕಾರಿ ನೌಕರರು ನಿಷ್ಠೆಯಿಂದ ನಿಷ್ಪಕ್ಷಪಾತವಾಗಿರುವುದೇ ಅಲ್ಲದೆ ಅದೇ ರೀತಿ ಕಾಣಬೇಕು. ಪ್ರಜಾಪ್ರಾತಿನಿಧ್ಯ ಕಾಯಿದೆ, 1951ರ ಭಾಗ 134ಎ ಕಡೆಗೆ ಗಮನವನ್ನು ಸೆಳೆಯುತ್ತಾ, ಸರ್ಕಾರಿ ಸೇವೆಯಲ್ಲಿರುವ ಯಾವುದೇ ವ್ಯಕ್ತಿ ಚುನಾವಣೆ ಅಥವಾ ಮತದಾನ ಅಥವಾ ಎಣಿಕೆ ಪ್ರತಿನಿಧಿಯಾಗಿ ಚುನಾವಣಾ ಅಭ್ಯರ್ಥಿಯ ಪರ ಕಾರ್ಯ ನಿರ್ವಹಿಸಿದರೆ ಅಂತಹವರಿಗೆ ಮೂರು ತಿಂಗಳ ಸಜಾ ಅಥವಾ ಜುಲ್ಮಾನೆ ಅಥವಾ ಎರಡೂ ಶಿಕ್ಷೆ ವಿಧಿಸಬಹುದಾಗಿದೆ.

ಬಿ) i) ಮಂತ್ರಿಗಳು ಚುನಾವಣಾ ಪ್ರವಾಸ ಕೈಗೊಂಡಾಗ ಸರ್ಕಾರಿ ಅಧಿಕಾರಿಗಳ ವರ್ತನೆ ಬಗ್ಗೆ ಹಲವಾರು ಸೂಚನೆಗಳನ್ನು ಭಾರತ ಚುನಾವಣಾ ಆಯೋಗ ಹೊರಡಿಸಿದೆ.

ಈಗಾಗಲೇ ಹೇಳಿರುವಂತೆ ಅವುಗಳನ್ನು ಪೂರ್ಣವಾಗಿ ಅನುಸರಿಸಬೇಕು. ಮಂತ್ರಿಗಳು ಮಾಡುವ ಪ್ರವಾಸಗಳು ಚುನಾವಣಾ ಸಭೆಗಳೆಂದು ತೋರುವಂತಿದ್ದರೆ, ಅಧಿಕಾರಿಗಳ ಕಾರ್ಯಾಚರಣೆ, ಕಾನೂನು ಮತ್ತು ಶಾಂತಿ ಪಾಲನೆಗಾಗಿ ಮಾತ್ರ ಸೀಮಿತಗೊಂಡಿರಬೇಕು.

ii) ಮಂತ್ರಿಗಳು ಪ್ರವಾಸದಲ್ಲಿ ಸರ್ಕಾರಿ ಕೆಲಸಗಳನ್ನು ಮಾತ್ರ ನಿರ್ವಹಿಸುತ್ತಿದ್ದರೆ, ಅವರು ಕೆಲಸವನ್ನು ನಿರ್ವಹಿಸಲು ಅನುಕೂಲವಾಗುವಂತೆ ಎಲ್ಲಾ ವ್ಯವಸ್ಥೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಅನುವು ಮಾಡಿ ಕೊಡಬೇಕು.

iii) ಅವರು ತಮ್ಮ ಪ್ರವಾಸದಲ್ಲಿ ಮೇಲಿನ ಎರಡು ಅಂಶಗಳ ಬಗ್ಗೆ ಸ್ಪಷ್ಟ ಸೂಚನೆ ನೀಡದಿದ್ದಲ್ಲಿ ಅಥವಾ ಅವರು ತಮ್ಮ ಪ್ರವಾಸ ಕಾರ್ಯಕ್ರಮದ ಪಟ್ಟಿಯಲ್ಲಿ ಏನೂ ವಿವರಗಳನ್ನು ಕೊಡದಿದ್ದಲ್ಲಿ ಈ ಪ್ರವಾಸಗಳು ಚುನಾವಣಾ ಪ್ರವಾಸಗಳೆಂದು ಭಾವಿಸಲಾಗುತ್ತದೆ.

ಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವುದಿದ್ದರೆ, ಆ ಸಭೆಯು ಸರ್ಕಾರಿ ಸ್ವಾಮ್ಯದಿಂದ ನಡೆಯುತ್ತಿದೆಯೇ ಅಥವಾ ಚುನಾವಣಾ ಪ್ರಚಾರದ್ದಾಗಿದೆಯೇ ಎಂಬುದನ್ನು ಆ ಮಂತ್ರಿಗಳೇ ನಿರ್ಧರಿಸಬೇಕಾಗುವುದು. ಆದರೂ, ಚುನಾವಣಾ ಪೂರ್ವದಲ್ಲಿ ನಡೆಯುವ ಸಭೆ ಸಾಮಾನ್ಯ ಚುನಾವಣಾ ಪ್ರಚಾರಕ್ಕೆಂದು ಭಾವಿಸಬೇಕು ಹಾಗೂ ಎಲ್ಲಾ ಸಿದ್ಧತೆಗಳನ್ನು ಮಂತ್ರಿಗಳ ಪರವಾಗಿ ಸಂಬಂಧಪಟ್ಟ ರಾಜಕೀಯ ಪಕ್ಷ, ಸಂಘ ಸಂಸ್ಥೆಗಳೇ ಮಾಡಬೇಕು. ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ಸಹ ಅವರೇ ಭರಿಸಬೇಕೇ ವಿನಃ ಸಾರ್ವಜನಿಕ ನಿಧಿಯಿಂದ ಭರಿಸತಕ್ಕದ್ದಲ್ಲ. ಚುನಾವಣೆ ಪ್ರವಾಸಗಳ ಸಮಯದಲ್ಲಿ ಸ್ಥಳೀಯ ಸಂಸ್ಥೆಗಳ ವಾಹನಗಳನ್ನು ಬೋರ್ಡು/ ಕಾರ್ಪೋರೇಶನ್‌ಗಳ ಮುಖ್ಯಸ್ಥರುಗಳು (ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಸರ್ಕಾರವು ಹೀಗೆ ನೇಮಕ ಮಾಡಿದ್ದಲ್ಲಿ) ಹಾಗೂ ಮಂತ್ರಿಗಳ ಸಿಬ್ಬಂದಿಗಳು ಚುನಾವಣೆ ಮುಗಿಯುವವರೆಗೂ ಉಪಯೋಗಿಸತಕ್ಕದ್ದಲ್ಲ. ಸ್ಥಳೀಯ ಸಂಸ್ಥೆಗಳ ಸದಸ್ಯರುಗಳಿಗೆ ಸಹ ಆಯಾಯ ಸಂಸ್ಥೆಗಳ ವಾಹನಗಳನ್ನು ಯಾವುದೇ ಚುನಾವಣಾ ಉದ್ದೇಶಗಳೆಂದು ಪರಿಗಣಿಸಬಹುದಾದ ಯಾವುದೇ ಉದ್ದೇಶಗಳಿಗೆ ಬಳಸುವುದಕ್ಕೆ ಅನುಮತಿ ನೀಡಕೂಡದು.

...4

ಚುನಾವಣಾ ಪ್ರಚಾರದ ಭಾಗವಾಗಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸಭೆಗಳನ್ನು ನಡೆಸುವ ಮತ್ತು ಮೆರವಣಿಗೆ ಹೋಗುವ ಸಮಯದಲ್ಲಿ ಧ್ವನಿವರ್ಧಕಗಳನ್ನು ಉಪಯೋಗಿಸಲು ಸಂಬಂಧಪಟ್ಟ ಪ್ರಾಧಿಕಾರಿಗಳು ಪರವಾನಗಿ ನೀಡಲು ತೀರ್ಮಾನ ತೆಗೆದುಕೊಳ್ಳುವಾಗ ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿರಬೇಕು.

6. <u>ಸರ್ಕಾರಿ ವಿಮಾನದ ಉಪಯೋಗ / ಹೆಲಿಕಾಪ್ಟರು ಬಳಕೆ:</u>

ಸರ್ಕಾರಿ ವಿಮಾನವನ್ನು / ಹೆಲಿಕಾಪ್ಟರನ್ನು ವಿಶೇಷ ತುರ್ತು ಸನ್ನಿವೇಶಗಳಲ್ಲಿ ಉದಾಹರಣೆಗೆ ಪ್ರಕೃತಿ ವಿಕೋಪ ಸಮಯ ಹೊರತುಪಡಿಸಿ ಇತರೆ ಯಾವ ಸಂದರ್ಭದಲ್ಲೂ ಚುನಾವಣೆ ಘೋಷಿಸಿದ ದಿನಾಂಕದಿಂದ ಅದು ಮುಕ್ತಾಯವಾಗುವವರೆಗೆ ಉಪಯೋಗಿಸಕೂಡದು.

7. <u>ಕಾರ್ಯಕ್ರಮದ ಘೋಷಣೆ ಮತ್ತು ಹೊಸ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು:</u>

ಭಾರತ ಚುನಾವಣಾ ಆಯೋಗವು ಚುನಾವಣೆಗಳನ್ನು ಘೋಷಿಸಿದ ದಿನಾಂಕದಿಂದ ಚುನಾವಣೆಗಳ ಪ್ರಕ್ರಿಯೆಯು ಮುಗಿಯುವವರೆಗೂ, ಉಪ-ಚುನಾವಣೆಗಳು ನಡೆಯುತ್ತಿರುವ ಜಿಲ್ಲೆಗಳಲ್ಲಿ ಹೊಸ ಯೋಜನೆ, ವಿದ್ಯುದ್ದೀಕರಣ, ಲೋಕೋಪಯೋಗಿ ಇಲಾಖೆಯ ಹೊಸ ಕೆಲಸಗಳು ಇತ್ಯಾದಿಗಳನ್ನು ಕೈಗೊಳ್ಳಬಾರದು.

8. ಇನ್ನಾವುದಾದರೂ ರೀತಿಯ ಸಹಾಯ, ಅಗತ್ಯವಾದ ನೆರವು ಹಾಗೂ ಸೌಲಭ್ಯಗಳನ್ನು ಚುನಾವಣಾ ಅಧಿಕಾರಿಗಳು ಕೇಳಿದಾಗ ನೀಡಬೇಕು.

9. ಈ ಸೂಚನೆಗಳು ತಕ್ಷಣದಿಂದಲೇ ಜಾರಿಗೆ ಬರುವುದು ಮತ್ತು ಇದನ್ನು ಸಂಬಂಧಪಟ್ಟ ಎಲ್ಲಾ ಅಧೀನ ಅಧಿಕಾರಿಗಳಿಗೆ ತಿಳಿಸುವುದು.

10. ಚುನಾವಣಾ ಆಯೋಗವು ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆ, ನಿರ್ದೇಶನ ಸೂಚನೆಗಳನ್ನು, ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಅನುಷ್ಠಾನ ತರುವುದರಲ್ಲಿಯೂ ನಿಗಾವಹಿಸಲು ಸೂಚಿಸಿದೆ. ಒಟ್ಟಾರೆಯಾಗಿ ಈ ಉಪ ಚುನಾವಣೆ ನಿಷ್ಪಕ್ಷಪಾತವಾಗಿ, ನಿರ್ಭೀತಿಯಿಂದಲೂ ಹಾಗೂ ಶಾಂತಿಯುತವಾಗಿ ನಡೆಯುವಂತಾಗಲು ಎಲ್ಲರ ಸಹಕಾರ ಪಡೆದುಕೊಂಡು ಸಕಲ ಏರ್ಪಾಡುಗಳನ್ನು ಮಾಡಲು ಸೂಚಿಸಿದೆ. ಯಾವುದೇ ವಿಷಯದಲ್ಲಿ ಅನುಮಾನಗಳು ಬಂದಲ್ಲಿ ಅವುಗಳ ಬಗ್ಗೆ ತಕ್ಷಣವೇ ಮುಖ್ಯ ಚುನಾವಣಾಧಿಕಾರಿಗಳನ್ನಾಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಿದೆ.

Ranganatha

(ಎಸ್.ವಿ. ರಂಗನಾಥ)
ಮುಖ್ಯ ಕಾರ್ಯದರ್ಶಿಗಳು

ಇವರಿಗೆ,

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಕಾರ್ಯದರ್ಶಿಗಳು.
2. ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು.

. . .5

3. ಜಿಲ್ಲಾ ಚುನಾವಣಾಧಿಕಾರಿ ಮತ್ತು ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು ಮತ್ತು ತುಮಕೂರು ಜಿಲ್ಲೆಗಳು.
4. ಜಿಲ್ಲಾ ಚುನಾವಣಾಧಿಕಾರಿ ಮತ್ತು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಅಪರ ಜಿಲ್ಲಾ ಚುನಾವಣಾಧಿಕಾರಿ ಮತ್ತು ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು.
6. ಅಪರ ಜಿಲ್ಲಾ ಚುನಾವಣಾಧಿಕಾರಿ ಮತ್ತು ಅಪರ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು (ಕೇಂದ್ರ), ಬೆಂಗಳೂರು.
7. ಎಲ್ಲಾ ಇಲಾಖಾ ಮುಖ್ಯಸ್ಥರು.
8. 20–ಮಂಡ್ಯ ಮತ್ತು 23– ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತದ ಉಪ ಚುನಾವಣೆ, 2013ರ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳು.
9. ಸಂಬಂಧ ಪಟ್ಟ ಎಲ್ಲಾ ತಹಸೀಲ್ದಾರರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು, ಮೈಸೂರು ಮತ್ತು ತುಮಕೂರು ಜಿಲ್ಲೆಗಳು
10. ಮು.ಚು.ಅ. ರವರ ಆಪ್ತ ಕಾರ್ಯದರ್ಶಿ, ಸಿಆಸುಇ (ಚುನಾವಣೆಗಳು)
11. ವಿಶೇಷ ಕರ್ತವ್ಯಾಧಿಕಾರಿ (OSD),(ಚುನಾವಣಾ ವೆಚ್ಚ), ಸಿಆಸುಇ (ಚುನಾವಣೆಗಳು.)
12. ವಿಶೇಷಾಧಿಕಾರಿ (ತರಬೇತಿ), ಸಿಆಸುಇ (ಚುನಾವಣೆಗಳು)
13. ವಿಶೇಷಾಧಿಕಾರಿ (ತಾಂತ್ರಿಕ), ಸಿಆಸುಇ (ಚುನಾವಣೆಗಳು)
14. ಜಂಟಿ ಮುಖ್ಯ ಚುನಾವಣಾಧಿಕಾರಿಗಳ ಆಪ್ತ ಶಾಖೆ
15. ರಕ್ಷಾ ಕಡತ.

ಹಿಂಬರಹ ಸಂಖ್ಯೆ: ಡಿಟಿಇ:02:ಇಎಲ್‌ಸಿ(1)2013 / 649 ದಿ: 02.08.13

ಮೇಲ್ಕಂಡ ಸರ್ಕಾರಿ ಸುತ್ತೋಲೆಯನ್ನು ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕಳುಹಿಸಿಕೊಡಲಾಗಿದೆ.

M. Devaiah
ಆಡಳಿತಾಧಿಕಾರಿ.